**<u>ದಿನಾಂಕಃ 11.09.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಹೆಚ್.ವಿ.ಎಸ್. ವಕೀಲರಿಂದಃ</u>**

ಸಾಕ್ಷಿಯು ತಮ್ಮ ಮುಖ್ಯ ಸಾಕ್ಷ್ಯ ವಿಚಾರಣಾ ಹೇಳಿಕೆಯನ್ನು ಪ್ರಮಾಣ ಪತ್ರ ರೂಪದಲ್ಲಿ ಸಲ್ಲಿಸಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ತಮಗೆ ತಿಳಿದಿದೆ ಮತ್ತು ಸತ್ಯವಾಗಿದೆ ಎಂದು ಹೇಳಿ, ಪ್ರಮಾಣ ಪತ್ರದಲ್ಲಿನ ಸಹಿ ತಮ್ಮದೆಂದು ಗುರುತಿಸಿರುತ್ತಾರೆ.

ನಾನು ಈ ದಿನ ನನ್ನ ಪರವಾಗಿ ಈ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸುತ್ತಿದ್ದೇನೆ.

1) ಎಂ.ಆರ್.1/2003-04 ನ ದೃಢಿಕೃತ ನಕಲನ್ನು ನಿಪಿ.1 ಎಂದು,

2) ಸರ್ವೆ ನಂ.45/4, 20/2, 186/1ಎ, 183/9, 181/11 ರ ಒಟ್ಟು 5 ಪಹಣಿ ಪತ್ರಿಕೆಗಳನ್ನು ನಿಪಿ.2 ರಿಂದ 6 ಎಂದು,

3) ದಿಃ23.11.2005ರ ಮರಣ ಶಾಸನವನ್ನು ನಿಪಿ.7 ಎಂದು, ಸಾಕ್ಷಿ ತನ್ನ ತಂದೆಯ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.7ಎ ಇಂದ 7ಡಿ ಎಂದು, ಮರಣ ಶಾಸನದ ಐದು ಜನ ಸಾಕ್ಷಿದಾರರ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ.7ಇ ಇಂದ ನಿಪಿ.7ಐ ಎಂದು ಗುರುತಿಸಲಾಯಿತು.

4) ಮರಣ ಪ್ರಮಾಣ ಪತ್ರವನ್ನು ನಿಪಿ8 ಎಂದು,

5) ಎಂ.ಆರ್.20/2007-08 ನ ದೃಢೀಕೃತ ನಕಲನ್ನು ನಿಪಿ.9 ಎಂದು,

6) ಸರ್ವೆ ನಂ.20/3, 45/5, 181/17, 183/13, 186/1ಎ2 ರ ಒಟ್ಟು 5 ಪಹಣಿ ಪತ್ರಿಕೆಗಳನ್ನು ನಿಪಿ.10 ರಿಂದ 14 ಎಂದು,

7) ಒಂದು ಪಟ್ಟಾ ಪುಸ್ತಕವನ್ನು ನಿಪಿ.15 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದ ಮೇರೆಗೆ ಪ್ರಕರಣವನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.**
**ನ್ಯಾಯಾಲಯ, ಚನ್ನಪಟ್ಟಣ.**